# <u>ಬೆಂಗಳೂರು ಮಹಾನಗರ ಪಾಲಿಕೆ</u>

## ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ

ಮಾಹಿತಿ ಹಕ್ಕು ಕಾಯ್ದೆ 2005 ಸೆಕ್ಷನ್ 4ರ ಅನ್ವಯ ಪ್ರಕಟಿಸಿದ್ದು

1. **ಕಛೇರಿಯ ಹೆಸರು** : **ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ**
   **ಡಿ ಜೆ ಹಳ್ಳಿ**
   ಬೆಂಗಳೂರು – 560 045.
   ದೂರವಾಣಿ: 22975881

2. **ರಚನೆ**



3. **<u>ಕಾರ್ಯಗಳು ಮತ್ತು ಕರ್ತವ್ಯಗಳು</u>**

ಬೆಂಗಳೂರು ಮಹಾನಗರ ಪಾಲಿಕೆಯ **ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆಯ** ವೈದ್ಯರು ಮತ್ತು ಸಿಬ್ಬಂದಿ ವರ್ಗದವರ ಕರ್ತವ್ಯಗಳು. 1) ವೈದ್ಯಾಧಿಕಾರಿಗಳು ಈ ಆಸ್ಪತ್ರೆಯ ಮುಖ್ಯಸ್ಥರಾಗಿರುತ್ತಾರೆ. ಇವರ ಅಧೀನದಲ್ಲಿ ಮೂರು ಶುಶ್ರೂಶಕಿಯರು ಓರ್ವ ಕಿ.ಮ.ಹ.ಸ. ಓರ್ವ ಪ್ರಯೋಗ ಶಾಲ ತಂತ್ರಜ್ಞರು ಮತ್ತು ಕಛೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಓರ್ವ ಗುಮಾಸ್ತರು ಇರುತ್ತಾರೆ. ಇಲ್ಲಿ ಪ್ರತಿನಿತ್ಯ ಪ್ರಸೂತಿ ಕಾರ್ಯಗಳು, ಗರ್ಭಿಣಿ ಸ್ತ್ರೀಯರಿಗೆ ತಪಾಸಣೆ ಸ್ಕ್ಯಾನಿಂಗ್ ಸೌಲಭ್ಯ ಇರುತ್ತದೆ ಮತ್ತು ಆರೋಗ್ಯ ಇಲಾಖೆಯಿಂದ ರೂಪಿಸಲ್ಪಡುವ ಕುಟುಂಬ ಕಲ್ಯಾಣ ಯೋಜನೆಗಳ ಕ್ಷೇತ್ರ ಮಟ್ಟದಲ್ಲಿ ಕಾರ್ಯ ರೂಪಕ್ಕೆ ತರುವ ಮತ್ತು ಜಾರಿಗೊಳಿಸುವ ಹೊಣೆಯನ್ನು ವೈದ್ಯಾಧಿಕಾರಿಗಳು ಹೊತ್ತಿರುತ್ತಾರೆ. ಇಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಏಡ್ಸ್ ಕುರಿತ ಆಪ್ತ ಸಮಾಲೋಚನ ಕೇಂದ್ರ ಇರುತ್ತದೆ ಮತ್ತು ಸಾರ್ವಜನಿಕರಿಗೆ ಕುಟುಂಬ ಕಲ್ಯಾಣ ಯೋಜನೆಗಳ ಕುರಿತು ತಿಳುವಳಿಕೆ ಉಂಟು ಮಾಡುವುದು ಆಸ್ಪತ್ರೆಯ ಬಹುತೇಕ ಎಲ್ಲಾ ಸೇವೆಗಳು ಉಚಿತವಾಗಿದ್ದು ಕೆಲವು ಸೇವೆಗಳಿಗೆ ಸೇವಾ ಶುಲ್ಕವನ್ನು ವಿಧಿಸಲಾಗುತ್ತಿರುತ್ತದೆ.

4. **ಅಧಿಕಾರಿ ಮತ್ತು ಸಿಬ್ಬಂದಿಗಳ ಕರ್ತವ್ಯಗಳು**

1) ಡಾ|| ಸುನೀತಾ, ವೈದ್ಯಾಧಿಕಾರಿ : ಇವರು ಸಿಬ್ಬಂದಿಗಳ ಬಟವಾಡೆ ಅಧಿಕಾರಿಯಾಗಿರುತ್ತಾರೆ. ಆಸ್ಪತ್ರೆಯ ಶುಚಿತ್ವದ ಬಗ್ಗೆ ಸಿಬ್ಬಂದಿಗಳಿಗೆ ಕೆಲಸ ಕಾರ್ಯಗಳನ್ನು ಹಂಚಿಕೆ ಮಾಡುವುದು, ರೋಗಿಗಳಿಗೆ ಚಿಕಿತ್ಸೆಯನ್ನು ನೀಡುವುದು. ಶಸ್ತ್ರ ಚಿಕಿತ್ಸೆಗಳನ್ನು ಕೈಗೊಳ್ಳುವುದು, ರೋಗಿಗಳಿಗೆ ಉತ್ತಮ ಸೇವೆ ಲಭ್ಯವಾಗುವ ಬಗ್ಗೆ ವೈಯಕ್ತಿಕ ಗಮನ ಹರಿಸುವುದು. ಇಲಾಖೆಯಿಂದ ರೂಪಿಸಲ್ಪಡುವ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

2) ಶ್ರೀಮತಿ ಕನ್ನಿಕಾ ಮೇರಿ ಶುಶ್ರೂಶಕಿ : ಇವರು ಆಸ್ಪತ್ರೆಯ ಶುಶ್ರೂಶಕಿಯಾಗಿದ್ದು ಆಸ್ಪತ್ರೆಯ ಪ್ರಸೂತಿ ವಿಭಾಗದಲ್ಲಿ ಹೆರಿಗೆ ಪ್ರಸೂತಿ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಔಷಧಿ ಉಗ್ರಾಣದ ಮೇಲ್ ಉಸ್ತುವಾರಿ ನೋಡಿಕೊಳ್ಳುವುದು ಮತ್ತು ವೈದ್ಯರು ಸೂಚಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.

3) ಶ್ರೀಮತಿ ರೇಚಲ್ ಶುಶ್ರೂಶಕಿ : ಇವರು ಆಸ್ಪತ್ರೆಯ ಶುಶ್ರೂಶಕಿಯಾಗಿದ್ದು ಆಸ್ಪತ್ರೆಯ ಪ್ರಸೂತಿ ವಿಭಾಗದಲ್ಲಿ ಹೆರಿಗೆ ಪ್ರಸೂತಿ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ರೋಗಿಗಳಿಗೆ ಚಿಕಿತ್ಸೆಯನ್ನು ನೀಡುವುದು, ಲಸಿಕಾ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಮತ್ತು ಶಸ್ತ್ರ ಚಿಕಿತ್ಸೆಗಳಲ್ಲಿ ವ್ಯದ್ಯರಿಗೆ ನೆರವಾಗುವುದು ಮತ್ತು ಇತರೆ ಕಾರ್ಯಗಳು.

4) ಶ್ರೀಮತಿ ರಾಜಕುಮಾರಿ ಕಿ ಮ ಆ ಸ : ಇವರು ಆಸ್ಪತ್ರೆಯ ಶುಶ್ರೂಶಕಿಯಾಗಿದ್ದು ಆಸ್ಪತ್ರೆಯ ಪ್ರಸೂತಿ ವಿಭಾಗದಲ್ಲಿ ಹೆರಿಗೆ ಪ್ರಸೂತಿ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ರೋಗಿಗಳಿಗೆ ಚಿಕಿತ್ಸೆಯನ್ನು ನೀಡುವುದು, ಲಸಿಕಾ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಮತ್ತು ಶಸ್ತ್ರ ಚಿಕಿತ್ಸೆಗಳಲ್ಲಿ ವ್ಯದ್ಯರಿಗೆ ನೆರವಾಗುವುದು ಮತ್ತು ಇತರೆ ಕಾರ್ಯಗಳು.

5) ಶ್ರೀಪ್ರಕಾಶ್ ಪ್ರಯೋಗ ಶಾಲಾ ತಂತ್ರಜ್ಞರು : ಇವರು ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಂಬಂಧಪಟ್ಟಂತ ರಕ್ತ ಪರೀಕ್ಷೆಗಳು ಮತ್ತು ಇತರ ಪರೀಕ್ಷೆಗಳನ್ನು ಕೈಗೊಳ್ಳುವುದು, ವರದಿಯನ್ನು ವೈದ್ಯರಿಗೆ ಸಲ್ಲಿಸುವುದು, ಕ್ಷಯ ರೋಗಿಗಳಿಗೆ ಕಫ ಪರೀಕ್ಷೆ ಮತ್ತು ಔಷಧಿಗಳನ್ನು ವಿತರಿಸುವುದು.

6) ಶ್ರೀ ಜಿ ರಮೇಶ್, ಗುಮಾಸ್ತರು : ಆಸ್ಪತ್ರೆಯ ಸಿಬ್ಬಂದಿಗಳಿಗೆ ವೇತನ ಬಟವಾಡೆ ಕೆಲಸಗಳು, ವಿದ್ಯುತ್ ನೀರಿನ ಬಿಲ್ಲುಗಳನ್ನು ತಯಾರಿಸಿ ಖಜಾನೆಯಿಂದ ಚೆಕ್ ಪಡೆದು ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿಸುವುದು, ಸಂತಾನ ಹರಣ ಶಸ್ತ್ರ ಚಿಕಿತ್ಸ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ವಿತರಿಸುವುದು, ಸಿಬ್ಬಂದಿಗಳ ಸೇವಾವಹಿಗಳನ್ನು ನಿರ್ವಹಿಸುವುದು ಇತ್ಯಾದಿ.

8) ಶ್ರೀ ಸೂರ್ಯ ಬಾಬು, ಚಾಲಕರು : ಇವರು ಆಸ್ಪತ್ರೆಯ ತುರ್ತು ವಾಹನ ಚಾಲಕರಾಗಿದ್ದು, ಕೆಲವು ತುರ್ತು ಸಂದರ್ಭದಲ್ಲಿ ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗಳಿಗೆ ಸಾಗಿಸುವುದು, ಕೇಂದ್ರ ಉಗ್ರಾಣದಿಂದ ಔಷಧಿಗಳನ್ನು ಹಿಂಡೆಂಟ್ ಮುಖಾಂತರ ಪಡೆದು, ಆಸ್ಪತ್ರೆಗೆ ಸರಬರಾಜು ಮಾಡುವುದು ಮತ್ತು ವೈದ್ಯರು ಸೂಚಿಸಿದಂತ ಇತರ ಕೆಲಸಗಳನ್ನು ನಿರ್ವಹಿಸುವುದು.

9) ನಾಲ್ಕನೇ ದರ್ಜೆ ನೌಕರರು : ಆಸ್ಪತ್ರೆಯ ಶುಚಿತ್ವ ನಿರ್ವಹಿಸುವುದು, ಸಾರ್ವಜನಿಕರಿಗೆ ಅಗತ್ಯ ಸೇವೆಯನ್ನು ಸಲ್ಲಿಸುವುದು ಮತ್ತು ವೈದ್ಯರು ಸೂಚಿಸಿದ ಕೆಲಸಗಳನ್ನು ನಿರ್ವಹಿಸುವುದು.

**5. ಮೇಲ್ವಿಚಾರಣೆ ಮತ್ತು ಜವಾಬ್ದಾರಿಯನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು**

ಕಛೇರಿಗೆ ಹಲವಾರು ಮೂಲಗಳಿಂದ ಆಸ್ಪತ್ರೆಗಳ ಸಿಬ್ಬಂದಿಗಳ ಬಗ್ಗೆ ಬರುವ ದೂರುಗಳನ್ನು ಸಲಹೆ, ಸೂಚನೆಗಳನ್ನು ಗುಮಾಸ್ತರು ಸ್ವೀಕರಿಸಿ ವೈದ್ಯರ ಗಮನಕ್ಕೆ ತಂದು, ವೈದ್ಯರು ಅವುಗಳನ್ನು ಕುರಿತು ಕ್ರಮ ಕೈಗೊಳ್ಳುತ್ತಾರೆ ಮತ್ತು ವೈದ್ಯರು ಮತ್ತು ಸಿಬ್ಬಂದಿಗಳಿಗೆ

ಕಾರ್ಯ ನಿರ್ವಹಣೆ ಕುರಿತು ಮಾಸಿಕ ಸಭೆಗಳನ್ನು ಏರ್ಪಡಿಸಲಾಗುತ್ತಿದೆ ಮತ್ತು ವರದಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು.

**6. ಕಾರ್ಯ ನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು:–**

1976 ರ ಕೆ.ಎಂ.ಸಿ. ಕಾಯ್ದೆಗಳು ಮತ್ತು ಮಾನ್ಯ ಆಯುಕ್ತರು ಮತ್ತು ಆರೋಗ್ಯಾಧಿಕಾರಿಗಳು ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸುವುದು.

**7. ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳನ್ನು**

ಮೇಲಾಧಿಕಾರಿಗಳು ಮತ್ತು ಮಾನ್ಯ ಆಯುಕ್ತರು ಕಾಲ ಕಾಲಕ್ಕೆ ನೀಡುವ ಸೂಚನೆಗಳು ಮತ್ತು ಸುತ್ತೋಲೆಗಳು ಮತ್ತು ಸರ್ಕಾರಿ ಆದೇಶಗಳನ್ನು ಪಾಲಿಸುವುದು. ಕೆ.ಸಿ.ಎಸ್.ಆರ್. ನಿಯಮಾವಳಿಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಬಡ್ಜೆಟ್ ಕೈಪಿಡಿ, ಕರ್ನಾಟಕ ಖಜಾನೆ ಕೋಡ್ ಮತ್ತು ಇತರೆ ಸೇವಾ ನಿಯಮಗಳು.

**8. ಇಲಾಖೆ ಹೊಂದಿರುವ ದಸ್ತಾವೇಜುಗಳ ಪಟ್ಟಿ**

1) ವೇತನ ಬಟವಾಡೆ ವಹಿ
2) ಸ್ಟಾಕ್ ವಹಿ
3) ವಿದ್ಯುತ್ ನೀರಿನ ಡಿ.ಸಿ. ಬಿಲ್ಲಿನ ವಹಿ
4) ಕ್ಯಾಶ್ ಬುಕ್ ವಹಿ
5) ಇಂದ ಮತ್ತು ಗೆ ರಿಜಿಸ್ಟಾರ್
6) ಒ.ಟಿ. ರಿಜಿಸ್ಟರ್
7) ಜನನ ವಹಿ

**9. ಅದರ ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು**

ಈ ಆಸ್ಪತ್ರೆಯ ವ್ಯಾಪ್ತಿಯಲ್ಲಿ ಹಾಲಿ ಜನ ಪ್ರತಿನಿಧಿಗಳು ಮತ್ತು ಸಾರ್ವಜನಿಕರನ್ನೊಳಗೊಂಡ ಸಂದರ್ಶಕರ ಮಂಡಳಿ ಅಸ್ತಿತ್ವದಲ್ಲಿದ್ದು ಸದರಿ ಮಂಡಳಿಯು

ಕಾಲಕಾಲಕ್ಕೆ ಸಭೆ ಸೇರಿ ಆಸ್ಪತ್ರೆಗಳು ನಿರ್ವಹಿಸಬೇಕಾಗಿರುವ ಕಾರ್ಯಗಳು ಮತ್ತು ಹೊಂದಿರುವ ಪ್ರಗತಿಗಳ ಕುರಿತು ಪರಿಶೀಲನೆಯನ್ನು ಮಾಡುತ್ತಿರುತ್ತದೆ.

**10. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿಯನ್ನು :–**

ಕಂಡಿಕೆ ೯ ರಲ್ಲಿ ವಿವರಿಸಿರುವಂತೆ ಸಂದರ್ಶಕರ ಮಂಡಳಿ ಅಸ್ತಿತ್ವದಲ್ಲಿದ್ದು ಈ ಸಭೆಯಲ್ಲಿ ಸ್ಥಳೀಯರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.

**11. ಮುನಿರೆಡ್ಡಿಪಾಳ್ಯ ಹೆರಿಗೆ ಆಸ್ಪತ್ರೆ ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ**

| ಕ್ರ. ಸಂ. | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ದೂರವಾಣಿ |
|---|---|---|---|
| 1. | ಡಾ॥ ಸುನೀತಾ<br>ವೈದ್ಯಾಧಿಕಾರಿಗಳು | ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ, ಡಿ ಜೆ ಹಳ್ಳಿ, | 22975881 |
| 2. | ಶ್ರೀಮತಿ ಕನ್ನಿಕಾ ಮೇರಿ<br>ಶುಶ್ರೂಶಕಿ | ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ, ಡಿ ಜೆ ಹಳ್ಳಿ, | 22975881 |
| 3. | ಶ್ರೀಮತಿ ರೇಚಲ್<br>ಶುಶ್ರೂಶಕಿ | ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ, ಡಿ ಜೆ ಹಳ್ಳಿ, | 22975881 |
| 4. | ಶ್ರೀಮತಿ ರಾಜಕುಮಾರಿ<br>ಕಿ.ಮ.ಹ.ಸ. | ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ, ಡಿ ಜೆ ಹಳ್ಳಿ, | 22975881 |
| 5. | ಶ್ರೀ ಪ್ರಕಾಶ್<br>ಪ್ರಯೋಗ ಶಾಲಾ ತಂತ್ರಜ್ಞರು | ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ, ಡಿ ಜೆ ಹಳ್ಳಿ, | 22975881 |
| 7. | ಶ್ರೀ ಜಿ ರಮೇಶ್<br>ದ್ವಿತೀಯ ದರ್ಜೆ ಗುಮಾಸ್ತರು | ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ, ಡಿ ಜೆ ಹಳ್ಳಿ, | 22975881 |
| ೮. | ಶ್ರೀ ಸೂರ್ಯ ಬಾಬು<br>ಚಾಲಕರು | ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ, ಡಿ ಜೆ ಹಳ್ಳಿ, | 22975881 |
| ೯. | ನಾಲ್ಕನೇ ದರ್ಜೆ ನೌಕರರು | ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ, ಡಿ ಜೆ ಹಳ್ಳಿ, | 22975881 |

**12. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು**

| ಕ್ರ. ಸಂ. | ಹೆಸರು ಮತ್ತು ಹುದ್ದೆ | ವೇತನ ಶ್ರೇಣಿ | ಮೂಲ ವೇತನ ರೂ. |
|---|---|---|---|
| 1. | ಡಾ॥ ಸುನೀತಾ ವೈದ್ಯಾಧಿಕಾರಿಗಳು | 14050-25050 | 16800/- |
| 2. | ಶ್ರೀಮತಿ ಕನ್ನಿಕಾ ಮೇರಿ ಶುಶ್ರೂಶಕಿ | 8825-16000 | 13700/- |
| 3. | ಶ್ರೀಮತಿ ರೇಚಲ್ ಶುಶ್ರೂಶಕಿ | 8825-16000 | 8200/- |
| 4. | ಶ್ರೀಮತಿ ರಾಜಕುಮಾರಿ ಶುಶ್ರೂಶಕಿ | 6250-12000 | 8000/- |
| 7. | ಶ್ರೀ ಪ್ರಕಾಶ್ ಪ್ರಯೋಗ ಶಾಲಾ ತಂತ್ರಜ್ಞರು | | ಗುತ್ತಿಗೆ 5000/- |
| 7. | ಶ್ರೀ ಜಿ ರಮೇಶ್ ದ್ವಿತೀಯ ದರ್ಜೆ ಗುಮಾಸ್ತರು | 5800-10500 | 6250/- |
| 8. | ಶ್ರೀ ಸೂರ್ಯ ಬಾಬು ಚಾಲಕರು | 5800-10500 | 7800/- |
| 9. | ನಾಲ್ಕನೇ ದರ್ಜೆ ನೌಕರರು | ಗುತ್ತಿಗೆ ಆಧಾರದ ಮೇಲೆ | - |

**13. 2009-10 ನೇ ಯಾವ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗಧಿ ಪಡಿಸಲಾದ ಅನುದಾನ ವಿವರಗಳು:**

ಯಾವುದು ಇಲ್ಲ.

**14. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು**

ಯಾವುದು ಇಲ್ಲ

**15. ಅದು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು**

ಯಾವುದು ಇಲ್ಲ

16. **ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು**

ಯಾವುದು ಇಲ್ಲ

17. **ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು:-**

ಯಾವುದು ಇಲ್ಲ

18. **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳು:**

ಉಪ ಆಯುಕ್ತರು, ಆರೋಗ್ಯ.

ಮುಖ್ಯ ಆರೋಗ್ಯಾಧಿಕಾರಿಗಳು.

ಆರೋಗ್ಯಾಧಿಕಾರಿಗಳು, ತ.ಮ.ಕೂ.ಕ.ಪೂರ್ವ

19. **ನಿಯಮಿಸಬಹುದಾದಂತಹ ಇತರ ಮಾಹಿತಿಗಳನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು.**

**ವೈದ್ಯಾಧಿಕಾರಿಗಳು**
ಬೋರ್ ಬ್ಯಾಂಕ್ ಹೆರಿಗೆ ಆಸ್ಪತ್ರೆ
ದೇವರ ಜೀವನ ಹಳ್ಳಿ
ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.